## 2007ರ ಕರ್ನಾಟಕ ಅಧಿನಿಯಮ ಸಂಖ್ಯೆ 6

## ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2007

### ಪ್ರಕಟಣೆಗಳ ಪಟ್ಟಿ

**ಪ್ರಕಟಣೆಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. 4ನೇ ಪ್ರಕರಣದ ತಿದ್ದುಪಡಿ
3. 11ನೇ ಪ್ರಕರಣದ ತಿದ್ದುಪಡಿ
4. 15ನೇ ಪ್ರಕರಣದ ತಿದ್ದುಪಡಿ
5. 17ನೇ ಪ್ರಕರಣದ ತಿದ್ದುಪಡಿ
6. ಹೊಸ 18ಎ ಪ್ರಕರಣದ ಸೇರ್ಪಡೆ
7. 19ನೇ ಪ್ರಕರಣದ ತಿದ್ದುಪಡಿ
8. 20ನೇ ಪ್ರಕರಣದ ತಿದ್ದುಪಡಿ
9. 21ನೇ ಪ್ರಕರಣದ ತಿದ್ದುಪಡಿ
10. 25ನೇ ಪ್ರಕರಣದ ತಿದ್ದುಪಡಿ
11. 27ನೇ ಪ್ರಕರಣದ ತಿದ್ದುಪಡಿ
12. 29ನೇ ಪ್ರಕರಣದ ತಿದ್ದುಪಡಿ
13. 31ನೇ ಪ್ರಕರಣದ ತಿದ್ದುಪಡಿ
14. 38ನೇ ಪ್ರಕರಣದ ತಿದ್ದುಪಡಿ
15. 39ನೇ ಪ್ರಕರಣದ ತಿದ್ದುಪಡಿ
16. 40ನೇ ಪ್ರಕರಣದ ತಿದ್ದುಪಡಿ
17. 45ನೇ ಪ್ರಕರಣದ ತಿದ್ದುಪಡಿ
18. 52ನೇ ಪ್ರಕರಣದ ತಿದ್ದುಪಡಿ
19. 53ನೇ ಪ್ರಕರಣದ ತಿದ್ದುಪಡಿ
20. 58ನೇ ಪ್ರಕರಣದ ತಿದ್ದುಪಡಿ
21. 60ನೇ ಪ್ರಕರಣವನ್ನು ಬಿಟ್ಟುಬಿಡುವುದು
22. 62ನೇ ಪ್ರಕರಣದ ತಿದ್ದುಪಡಿ
23. 63ನೇ ಪ್ರಕರಣದ ತಿದ್ದುಪಡಿ
24. 72ನೇ ಪ್ರಕರಣದ ತಿದ್ದುಪಡಿ
25. 73ನೇ ಪ್ರಕರಣದ ತಿದ್ದುಪಡಿ.
26. 74ನೇ ಪ್ರಕರಣದ ತಿದ್ದುಪಡಿ
27. ಒಂದನೇ ಅನುಸೂಚಿಯ ತಿದ್ದುಪಡಿ
28. ಮೂರನೇ ಅನುಸೂಚಿಯ ತಿದ್ದುಪಡಿ
29. ನಾಲ್ಕನೇ ಅನುಸೂಚಿಯ ತಿದ್ದುಪಡಿ
30. ಅಧಿಸೂಚನೆಯನ್ನು ತಿದ್ದುಪಡಿಮಾಡಲು ಅಧಿಕಾರ


### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2007ರ ಅಧಿನಿಯಮ ಸಂಖ್ಯೆ 6.-** ಆಯವ್ಯಯದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[ 2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 21 ]

(ಭಾರತ ಸಂವಿಧಾನದ ಏಳನೇ ಅನುಸೂಚಿಯ 2ನೇ ಪಟ್ಟಿಯ 54ನೇ ನಮೂದು).

**2007ರ ಕರ್ನಾಟಕ ಅಧಿನಿಯಮ ಸಂಖ್ಯೆ 6**

(2007ರ ಮಾರ್ಚ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)

# ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2007

(2007ರ ಮಾರ್ಚ್ ಮೂವತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ, 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು 2007ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **4ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003 ರ (2004ರ ಕರ್ನಾಟಕ ಅಧಿನಿಯಮ 32), (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದ (4)ನೇ ಉಪ ಪ್ರಕರಣದಲ್ಲಿ "ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ" ಎಂಬ ಪದಗಳ ತರುವಾಯ "ಅಥವಾ ಸಂದಾಯವಾಗತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಕಡಿತಗೊಳಿಸಿದಂಥ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **11ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 11ನೇ ಪ್ರಕರಣದ (ಎ) ಉಪ ಪ್ರಕರಣದಲ್ಲಿ (6)ನೇ ಖಂಡದಲ್ಲಿ "ಲೈಟ್ ಡೀಸಲ್ ಆಯಿಲ್," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲು ಬಿಡಲಾಗಿದೆಯೆಂದು ಭಾವಿಸತಕ್ಕದ್ದು.

4. **15ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(1) (1)ನೇ ಉಪಪ್ರಕರಣದಲ್ಲಿ (ಎ) ಖಂಡದಲ್ಲಿ "ನಾಲ್ಕು ಅನುಕ್ರಮ ತ್ರೈಮಾಸಿಕಗಳ ಅವಧಿಯಲ್ಲಿ" ಎಂಬ ಪದಗಳಿಗೆ "ಒಂದು ವರ್ಷದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ ಪ್ರಕರಣದ ಒಂದಕ್ಕಿಂತ ಹೆಚ್ಚು ಖಂಡಗಳ ಅಡಿಯಲ್ಲಿ ಬರುವ ತರಹದ ವ್ಯವಹಾರದ ಸ್ವರೂಪವನ್ನು ಹೊಂದಿರುವ ವ್ಯಾಪಾರಿಯು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಅಂಥ ಯಾವುದೇ ಒಂದು ತರಹದ ಅಥವಾ ಎಲ್ಲ ತರಹದ ವ್ಯವಹಾರ ಸ್ವರೂಪಗಳಿಗೆ ಸಂಬಂಧಪಟ್ಟಂತೆ ತನ್ನ ವಹಿವಾಟಿನ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಸಂಬಂಧದಲ್ಲಿ ಸದರಿ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರತಕ್ಕದ್ದು, ಎಂದರೆ:-

(ಎ) ಆ ವ್ಯಾಪಾರಿಯು ಪ್ರತಿಯೊಂದು ತರಹದ ತನ್ನ ವ್ಯವಹಾರಕ್ಕೆ ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸಿಕೊಂಡು ಬಂದಿರಬೇಕು;

(ಬಿ) (1)ನೇ ಉಪ ಪ್ರಕರಣದ (ಎ) ಖಂಡದ ಅಡಿಯಲ್ಲಿ ಬರುವ ಅಂಥ ವ್ಯಾಪಾರಿಯ ಎಲ್ಲ ತರಹದ ವ್ಯವಹಾರಗಳ ಸಂಬಂಧದಲ್ಲಿ ಒಂದು ವರ್ಷದಲ್ಲಿಯ ಒಟ್ಟು ವಹಿವಾಟು ಸದರಿ ಖಂಡದ ಅಡಿಯಲ್ಲಿ ಅಧಿಸೂಚಿಸಬಹುದಾದ ಮೊಬಲಗನ್ನು ಮೀರಿರಬಾರದು;

(ಸಿ) ಅಂಥ ವ್ಯವಹಾರದ ಪ್ರತಿಯೊಂದು ತರಹದ ಸಂಬಂಧದಲ್ಲಿ ತನ್ನ ಒಟ್ಟು ವಹಿವಾಟಿನ ಅಥವಾ ಒಟ್ಟು ಪ್ರತಿಫಲದ ಮೇಲೆ ಅಂಥ ವ್ಯಾಪಾರಿಯು ರಾಜಿಯ ರೂಪದಲ್ಲಿ ಸಂದಾಯ ಮಾಡಬೇಕಾದ ಮೊಬಲಗು (1)ನೇ ಉಪ ಪ್ರಕರಣದ ಅಡಿಯಲ್ಲಿ ಆ ತರಹದ ವ್ಯವಹಾರಕ್ಕಾಗಿ ಅಧಿಸೂಚಿತಬಹುದಾದಂತೆ ಇರತಕ್ಕದ್ದು;

(ಡಿ) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ತರಹದ ವ್ಯವಹಾರಕ್ಕಾಗಿ ರಾಜಿ ವಿಧಾನದಲ್ಲಿ ಸಂದಾಯಮಾಡತಕ್ಕ ಮೊಬಲಗನ್ನು ಲೆಕ್ಕಹಾಕುವುದಕ್ಕಾಗಿ ಅಂಥ ಪ್ರತಿಯೊಂದು ತರಹದ ಸಂಬಂಧದಲ್ಲಿ ಒಟ್ಟು ವಹಿವಾಟು ಅಥವಾ ಒಟ್ಟು ಪ್ರತಿಫಲವನ್ನು ಆ ವ್ಯಾಪಾರಿಯು ತನ್ನ ಎಲ್ಲಾ ತರಹದ ವ್ಯವಹಾರಗಳಿಂದ ಪಡೆಯುವ ಒಟ್ಟು ವಹಿವಾಟಿನಿಂದ ಕಳೆಯತಕ್ಕದ್ದು;

(ಇ) (1)ನೇ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ತನ್ನ ಆಯ್ಕೆಯನ್ನು ಚಲಾಯಿಸದ ಅಥವಾ ರಾಜಿಗೆ ಅರ್ಹವಾಗದಂಥ ತರಹದ ವ್ಯವಹಾರದ ಸಂಬಂಧದಲ್ಲಿ, (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ ಕಳೆದ ತರುವಾಯ ಬಾಕಿ ಉಳಿದ ಒಟ್ಟು ವಹಿವಾಟಿನಿಂದ ನಿರ್ಧರಿಸಲಾದ ತೆರಿಗೆದಾಯಕನ ವಹಿವಾಟಿನ ಮೇಲೆ ಆತನು 4ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ತೆರಿಗೆ ಸಂದಾಯಮಾಡಲು ಗುರಿಯಾಗತಕ್ಕದ್ದು."

(3) (5)ನೇ ಉಪ ಪ್ರಕರಣದಲ್ಲಿ,-

(ಎ)(ಬಿ) ಖಂಡದಲ್ಲಿ "ಸಂದಾಯಮಾಡತಕ್ಕ ಮೊಬಲಗಿನ ಮೇಲೆ" ಎಂಬ ಪದಗಳಿಗೆ "ಸಂದಾಯ ಮಾಡಬೇಕಾದ ಅಥವಾ ಮಾಡಿದ ಮೊಬಲಗಿನ ಮೇಲೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ, "ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ" ಎಂಬ ಪದಗಳ ತರುವಾಯ "ಆತನು" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಸೇರಿಸಿರುವುದಾಗಿ ಭಾವಿಸತಕ್ಕದ್ದು.

(ಸಿ) (ಡಿ) ಖಂಡದಲ್ಲಿ "ಮುರುಗಡೆಮಾಡತಕ್ಕದ್ದು." ಎಂಬ ಪದಗಳು ಮತ್ತು ವಿರಾಮಚಿಹ್ನೆಗೆ "ಮುರುಗಡೆ ಮಾಡತಕ್ಕದ್ದು;" ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಪ್ರತಿಯೋಜಿಸತಕ್ಕದ್ದು.

(ಡಿ) ಹಾಗೆ ತಿದ್ದುಪಡಿ ಮಾಡಿದ (ಡಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು 2006ರ ಏಪ್ರಿಲ್ ಒಂದನೇ ದಿನಾಂಕದಿಂದ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:-

"(ಇ) ಕಾಮಗಾರಿಗಳ ಕರಾರನ್ನು ನಿರ್ವಹಿಸುತ್ತಿರುವ ಮತ್ತು (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ರಾಜಿಗೆ ಆಯ್ಕೆ ಮಾಡಿಕೊಂಡ ಒಬ್ಬ ವ್ಯಾಪಾರಿಯು ಆತನು ನೆರವೇರಿಸಿದ ಕಾಮಗಾರಿ ಕರಾರಿನ ಒಟ್ಟು ಪ್ರತಿಫಲದ ಮೇಲೆ ರಾಜಿಯ ರೂಪದಲ್ಲಿ ಸಂದಾಯಮಾಡುವ ತೆರಿಗೆಗೆ ಹೆಚ್ಚುವರಿಯಾಗಿ, 3ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ, ಸಂದಾಯಮಾಡತಕ್ಕ ತೆರಿಗೆ ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು".

5. **17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,-

(1) (2)ನೇ ಖಂಡದಲ್ಲಿ, "ಮೇಲಿನ (1)ನೇ ಖಂಡದಲ್ಲಿ" ಎಂಬ ಪದಗಳಿಗೆ ಮೊದಲು "ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟಗಳಿಗೆ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು ಮತ್ತು ಯಾವಾಗಲು ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು;

(2) (3)ನೇ ಖಂಡದಲ್ಲಿ, "ಹೆಚ್ಚಿಗೆಯಾಗಿ ಬಳಸಿದರೆ," ಎಂಬ ಪದಗಳು ಮತ್ತು ಅಲ್ಪವಿರಾಮದ ತರುವಾಯ "ಅಥವಾ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

(3) (3)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:-

"(4) ಮೇಲಿನ ಯಾವುವೇ ಖಂಡಗಳಡಿಯಲ್ಲಿ ಬಂದರೆ ಮತ್ತು ಯಾವುವೇ ಸರಕುಗಳ ಅಥವಾ ಬಂಧಿತ ವಿದ್ಯುತ್ ಉತ್ಪಾದನೆಯಲ್ಲಿ ಇಂಧನವಾಗಿ ಉಪಯೋಗಿಸುವುದಕ್ಕಾಗಿ ಯಾವುದೇ ಪೆಟ್ರೋಲಿಯಂ ಉತ್ಪನ್ನವನ್ನು ಖರೀದಿಸಿದರೆ,"

**6. ಹೊಸ 18ಎ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 18ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**18ಎ. ಕೆಲವು ಸರಕುಗಳ ಸಂಬಂಧದಲ್ಲಿ ಮೂಲದಲ್ಲಿಯೇ ತೆರಿಗೆಯನ್ನು ಮುರಿದುಕೊಳ್ಳುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಉತ್ಪಾದನೆ ಅಥವಾ ಸಂಸ್ಕರಣೆಯಲ್ಲಿ ಬಳಸುವುದಕ್ಕಾಗಿ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ಇತರ ಉದ್ದೇಶಕ್ಕಾಗಿ ಬಳಸುವುದಕ್ಕಾಗಿ ಎಣ್ಣೆಬೀಜಗಳು ಅಥವಾ ಕಚ್ಚಾ ಎಣ್ಣೆ ಅಥವಾ ಹಿಂಡಿ ಅಥವಾ ಕಬ್ಬಿಣದ ಮತ್ತು ಉಕ್ಕಿನ ಸ್ಕ್ರಾಪ್‌ಗಳು ಅಥವಾ ಆಯುಕ್ತರು ಅಧಿಸೂಚಿಸಬಹುದಾದ ಯಾವುವೇ ಇತರ ಸರಕುಗಳನ್ನು ಖರೀದಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಥ ಸರಕುಗಳನ್ನು ತನಗೆ ಮಾರಾಟ ಮಾಡಿದ ನೋಂದಾಯಿತ ವ್ಯಾಪಾರಿಗೆ ತಾನು ಸಂದಾಯಮಾಡತಕ್ಕ ಮೊಬಲಗಿನಿಂದ, 4ನೇ ಪ್ರಕರಣದ ಅಡಿಯಲ್ಲಿ ಆ ಸರಕುಗಳ ಮಾರಾಟದ ಮೇಲೆ ಸಂದಾಯಮಾಡತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಮುರಿದುಕೊಳ್ಳತಕ್ಕದ್ದು.

(2) ಯಾವುವೇ ಸರಕುಗಳ ಸಂಬಂಧದಲ್ಲಿ ಅವರು ಸಂದಾಯಮಾಡತಕ್ಕ ಮೊಬಲಗು, ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ್ದರೆ ಅಥವಾ ಭಾರತದ ಸರಹದ್ದುಗಳಿಂದ ಹೊರಕ್ಕೆ ರಫ್ತಿಗೆ ಅಥವಾ ಭಾರತದ ಸರಹದ್ದುಗಳೊಳಕ್ಕೆ ಆಮದಿಗೆ ಅಥವಾ ರಾಜ್ಯದ ಹೊರಗೆ ಮಾರಾಟಕ್ಕೆ ಸಂಬಂಧಿಸಿದ್ದರೆ, (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಮುರುಗಡೆಯನ್ನು ಮಾಡತಕ್ಕದ್ದಲ್ಲ.

(3) ವ್ಯಾಪಾರಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆಯನ್ನು, ಮಾರಾಟ ಮಾಡಿದ ವ್ಯಾಪಾರಿಯು ನೀಡಿದ ತೆರಿಗೆ ದರಪಟ್ಟಿಯ ಆಧಾರದ ಮೇಲೆ ಮಾಡತಕ್ಕದ್ದು.

(4) (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಮುರಿದುಕೊಳ್ಳುತ್ತಿರುವ ವ್ಯಾಪಾರಿಯು ತಾನು ಹಿಂದಿನ ತಿಂಗಳಲ್ಲಿ ಮುರುಗಡೆ ಮಾಡಿದ ತೆರಿಗೆಯ ವಿವರಗಳನ್ನು ಒಳಗೊಂಡ ನಿಯಮಿಸಲಾದ ನಮೂನೆಯಲ್ಲಿರುವ ಒಂದು ವಿವರಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಮತ್ತು ಹಾಗೆ ತಾನು ಮುರಿದುಕೊಂಡ ತೆರಿಗೆಯ ಮೊಬಲಗನ್ನು ಯಾವ ತಿಂಗಳಲ್ಲಿ ಅಂಥ ಮುರುಗಡೆಯನ್ನು ಮಾಡಲಾಗಿದೆಯೋ ಆ ಹಿಂದಿನ ತಿಂಗಳು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳ ಒಳಗೆ ಸಂದಾಯಮಾಡತಕ್ಕದ್ದು ಮತ್ತು ಹಾಗೆ ಸಂದಾಯಮಾಡತಕ್ಕ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು.

(5) ಈ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ ನಿಯಮಿಸಲಾದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಿದಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಾಪಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ತನ್ನ ಅತ್ಯುತ್ತಮ ವಿವೇಚನೆಗನುಸಾರ ಅಂಥ ವ್ಯಾಪಾರಿಯು ಈ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ನಿರ್ಧರಿಸಬಹುದು ಮತ್ತು ಹಾಗೆ ನಿರ್ಧರಿಸಿದ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಮೊಬಲಗೆಂದು ಭಾವಿಸತಕ್ಕದ್ದು.

(6) (4)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಮೀರಿ, ಮುರಿದುಕೊಂಡ ತೆರಿಗೆಯನ್ನು ಸಂದಾಯ ಮಾಡುವಲ್ಲಿ ತಪ್ಪಿದರೆ (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ವ್ಯಾಪಾರಿಯು, ಅಂಥ ತಪ್ಪು ಮುಂದುವರಿದ ಅವಧಿಯಲ್ಲಿ 37ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಬಡ್ಡಿಗೆ ಸಮನಾದ ಮೊತ್ತವನ್ನು ಬಡ್ಡಿಯ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(7) (1)ನೇ ಉಪ-ಪ್ರಕರಣದಡಿಯಲ್ಲಿ ತೆರಿಗೆ ಮುರಿದುಕೊಳ್ಳುತ್ತಿರುವ ವ್ಯಾಪಾರಿಯು ಯಾರಿಂದ ಹಾಗೆ ತೆರಿಗೆ ಮುರಿದುಕೊಳ್ಳಲಾಗುತ್ತಿದೆಯೋ ಆ ವ್ಯಾಪಾರಿಗೆ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ, ನಿಯಮಿಸಲಾದ ಪ್ರಾಧಿಕಾರಿಯಿಂದ ಪಡೆದುಕೊಳ್ಳಲಾದ ಒಂದು ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

(8) (4)ನೇ ಉಪಪ್ರಕರಣಕ್ಕನುಸಾರವಾಗಿ ತೆರಿಗೆ ಮುರಿದುಕೊಂಡು ಮಾಡಿದ ಸಂದಾಯವು, ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಮಾರಾಟ ಮಾಡುವ ವ್ಯಾಪಾರಿಯಿಂದ ಇತರ ಯಾವುದೇ ವಿಧಾನದಲ್ಲಿ ವಸೂಲು ಮಾಡಿಕೊಳ್ಳುವುದಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

(9) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಅವನ ವ್ಯಾಪಾರದ ಸಂಬಂಧದಲ್ಲಿ ತೆರಿಗೆಯನ್ನು (4)ನೇ ಉಪ-ಪ್ರಕರಣದ ಅಡಿಯಲ್ಲಿ ಜಮಾ ಮಾಡಿದ್ದರೆ ಅಂಥ ಮಾರಾಟ ಮಾಡುವ ವ್ಯಾಪಾರಿಯು ಅಂಥ ಮಾರಾಟಗಳ ಸಂಬಂಧದಲ್ಲಿ ಯಾವುದೇ ಅವಧಿಗಾಗಿ ಸಂದಾಯ ಮಾಡತಕ್ಕ ತೆರಿಗೆಯಿಂದ ಸದರಿ ಉಪಪ್ರಕರಣದಡಿಯಲ್ಲಿ ಈಗಾಗಲೇ ಜಮಾಮಾಡಿದ ತೆರಿಗೆಯ ಮೊಬಲಗಷ್ಟನ್ನು ಕಳೆಯತಕ್ಕದ್ದು.

(10) ಅಂಥ ಮಾರಾಟದ ಮೇಲೆ ಈಗಾಗಲೇ ತೆರಿಗೆಯನ್ನು ಜಮಾಮಾಡಲಾಗಿದೆ ಎಂದು ಮತ್ತು ಹಾಗೆ ಜಮಾಮಾಡಿದ ತೆರಿಗೆಯ ಸರಿಯಾದ ಮೊಬಲಗು ಎಷ್ಟು ಎಂಬುದನ್ನು ರುಜುವಾತುಪಡಿಸುವ ಹೊಣೆಯು ಹಾಗೆ ತೆರಿಗೆ ಕಳೆಯಬೇಕೆಂದು ಕ್ಲೇಮುಮಾಡುವ ವ್ಯಾಪಾರಿಯ ಮೇಲಿರತಕ್ಕದ್ದು."

**7. 19ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 19ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ "ತೆರಿಗೆಯನ್ನು ಲೆಕ್ಕಹಾಕತಕ್ಕದ್ದು" ಎಂಬ ಪದಗಳಿಗೆ "ಮರುಸಂದಾಯ ಮಾಡಬೇಕಾದ ಹೂಡುವಳಿ ತೆರಿಗೆಯನ್ನು ಲೆಕ್ಕಹಾಕತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

**8. 20ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 20ನೇ ಪ್ರಕರಣದಲ್ಲಿ,–

(1) ಶೀರ್ಷಿಕೆಯಲ್ಲಿ "ಅಂತರ ರಾಜ್ಯ ಮಾರಾಟಗಳ" ಎಂಬ ಪದಗಳ ತರುವಾಯ "ಮತ್ತು ವಿಶೇಷ ಆರ್ಥಿಕ ವಲಯ ಘಟಕಗಳ ಹಾಗೂ ಅಭಿವೃದ್ಧಿದಾರರ" ಎಂಬ ಪದಗಳನ್ನು ಸೇರಿಸತಕ್ಕದ್ದು;

(2) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳು ನೀಡಿದ ಪ್ರಾಧಿಕಾರದ ಮೂಲಕ ಸ್ಥಾಪಿಸಲಾದ ಯಾವುದೇ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರರಾದ ಅಥವಾ ಯಾವುದೇ ವಿಶೇಷ ಆರ್ಥಿಕ ವಲಯದಲ್ಲಿ ಇರುವಂಥ ಒಂದು ಘಟಕವಾದ ಒಬ್ಬ ನೋಂದಾಯಿತ ವ್ಯಾಪಾರಿಯು ಹೂಡುವಳಿಗಳ ಖರೀದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು, ನಿಯಮಿಸಬಹುದಾದಂಥ ಷರತ್ತುಗಳು ಮತ್ತು ವಿಧಾನಗಳಿಗೊಳಪಟ್ಟು ಮರುಪಾವತಿ ಮಾಡತಕ್ಕದ್ದು ಅಥವಾ ಅಂಥ ವ್ಯಾಪಾರಿಯು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಯಿಂದ ಕಳೆಯತಕ್ಕದ್ದು."

**9. 21ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 21ನೇ ಪ್ರಕರಣದಲ್ಲಿ "ಅಥವಾ ಎಂಬೆಸಿಗಳ" ಎಂಬ ಪದಗಳ ತರುವಾಯ ", ಆದರೆ ಅಧಿಸೂಚಿಸಬಹುದಾದಂತೆ ಕಾನ್ಸುಲೇಟ್‌ಗಳ ಅಥವಾ ಅಂಥ ದೇಶಗಳ ಎಂಬೆಸಿಗಳನ್ನು ಹೊರತುಪಡಿಸಿ," ಎಂಬ ಪದಗಳನ್ನು, ಅಲ್ಪವಿರಾಮ ಚಿಹ್ನೆಗಳನ್ನು ಸೇರಿಸತಕ್ಕದ್ದು.

**10. 25ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 25ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ "ಅಂಥ ಅರ್ಜಿಯನ್ನು ಮಾಡಿಕೊಂಡ ತಿಂಗಳ ತರುವಾಯದ ತಿಂಗಳ ಮೊದಲನೇ ದಿನದಿಂದ ಅಥವಾ ಪರಸ್ಪರ ಒಪ್ಪಿಕೊಳ್ಳಬಹುದಾದ ಅಂಥ ಮೊದಲ ದಿನದಿಂದ" ಎಂಬ ಪದಗಳಿಗೆ "ಅಂಥ ಅರ್ಜಿಯ ದಿನಾಂಕದಿಂದ ಅಥವಾ ಅಂಥ ವ್ಯಾಪಾರಿಯ ವ್ಯವಹಾರದ ಪ್ರಾರಂಭದ ದಿನಾಂಕದಿಂದ, ಈ ಎರಡರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. 27ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 27ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ "ಆತನು ಹೊಂದಿದ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳಿಗೆ ಪ್ರಚಲಿತ ಮಾರುಕಟ್ಟೆ

ಬೆಲೆಯ ಮೇಲೆ ತೆರಿಗೆಯನ್ನು ಸಂದಾಯ ಮಾಡಲು" ಎಂಬ ಪದಗಳಿಗೆ "ಆತನು ಹೊಂದಿರುವ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳಿಗೆ ಪ್ರಚಲಿತ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕಲಾದಂಥ ಹೂಡುವಳಿ ತೆರಿಗೆಯನ್ನು ಮರುಸಂದಾಯ ಮಾಡಲು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. 29ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 29ನೇ ಪ್ರಕರಣದಲ್ಲಿ,–

(1) (1)ನೇ ಉಪ ಪ್ರಕರಣದಲ್ಲಿ "ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟ ಮಾಡಿದ್ದರೆ ಅಥವಾ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ" ಎಂಬ ಪದಗಳಿಗೆ "ನಿಯಮಿಸಲಾದ ಮೌಲ್ಯಕ್ಕಿಂತ ಹೆಚ್ಚುವರಿಯಾಗಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟ ಮಾಡಿದ್ದರೆ ಅಥವಾ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (3)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(4) (1)ನೇ ಅಥವಾ (3)ನೇ ಉಪ ಪ್ರಕರಣಗಳಲ್ಲಿ ಅಥವಾ 7ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಿವಿಲ್ ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ಒಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡ ತೆರಿಗೆಯ ಬೆಲೆಪಟ್ಟಿಯನ್ನು ಅಥವಾ ಮಾರಾಟದ ಬಿಲ್ಲನ್ನು ನೀಡತಕ್ಕದ್ದು."

**13. 31ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 31ನೇ ಪ್ರಕರಣದಲ್ಲಿ,–

(1) (4)ನೇ ಉಪ ಪ್ರಕರಣದಲ್ಲಿ "ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟರ್ಡ್ ಅಕೌಂಟೆಂಟ್" ಎಂಬ ಪದಗಳು, ಅಲ್ಪವಿರಾಮ ಚಿಹ್ನೆಗಳಿಗೆ "ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟೆಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (5)ನೇ ಉಪ ಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(6) ತಾನಾಗಿಯೇ ಅಥವಾ ಇನ್ನೊಬ್ಬರ ಮೂಲಕ ಒಂದು ಕಟ್ಟಡವನ್ನು ಕಟ್ಟುವ ಅಥವಾ ಇತರ ಸಿವಿಲ್ ಕಾಮಗಾರಿಯನ್ನು ನಿರ್ವಹಿಸುವ ಕಾಮಗಾರಿ ಕರಾರನ್ನು ಪೂರ್ಣವಾಗಿ ಅಥವಾ ಭಾಗಶಃ ಯಾವುದೇ ತೆರಿಗೆ ಅವಧಿಯಲ್ಲಿ ನಿರ್ವಹಿಸಿಕೊಡುವಂಥ ಲಿಖಿತ ಒಪ್ಪಂದವನ್ನು ಮಾಡಿಕೊಂಡ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿ ಅಥವಾ ಭೂಮಾಲೀಕನು ಸೇರಿದಂತೆ ಈ ಅಧಿನಿಯಮದಲ್ಲಿ ನೋಂದಾಯಿಸಿಕೊಳ್ಳಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು ಅಂಥ ಒಪ್ಪಂದದ ಪ್ರತಿಯನ್ನು ತಾನು ಯಾರಿಗೆ ತೆರಿಗೆ ವಿವರಪಟ್ಟಿಯನ್ನು ಸಲ್ಲಿಸಲು ಅಗತ್ಯಪಡಿಸಲಾಗಿದೆಯೋ ಆ ನಿಯಮಿತ ಪ್ರಾಧಿಕಾರಿಗೆ, ತರುವಾಯದಲ್ಲಿ ಬರುವ ತೆರಿಗೆ ಅವಧಿಯು ಮುಕ್ತಾಯಗೊಳ್ಳುವುದರೊಳಗೆ, ಸಲ್ಲಿಸತಕ್ಕದ್ದು."

**14. 38ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿ,–

(1) (ಎ) (5)ನೇ ಉಪ ಪ್ರಕರಣಕ್ಕೆ ಅದರ (ಎ) ಖಂಡವೆಂದು ಮರುಸಂಖ್ಯೆ ನೀಡತಕ್ಕದ್ದು, ಹಾಗೆ ಮರು ಸಂಖ್ಯೆ ನೀಡಿದ ತರುವಾಯ (ಎ) ಖಂಡದಲ್ಲಿ "ತನ್ನ ಗಮನಕ್ಕೆ ಬಂದ ಮೇಲೆ" ಎಂಬ ಪದಗಳ ತರುವಾಯ "ತನ್ನ ಜಂಟಿ ಆಯುಕ್ತನ ಅಥವಾ ಅಪರ ಆಯುಕ್ತನ ಪೂರ್ವಾನುಮತಿಯೊಡನೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಹಾಗೆ ಮರು ಸಂಖ್ಯೆ ನೀಡಿದ (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿ) ಜಂಟಿ ಆಯುಕ್ತ ಅಥವಾ ಅಪರ ಆಯುಕ್ತನು, ವ್ಯಾಪಾರಿಯು ಅಂಥ ರಕ್ಷಣಾತ್ಮಕ ತೆರಿಗೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸಿದ ಯಾವುದೇ ಅರ್ಜಿಯ ಮೇಲೆ ಅಥವಾ ಅಂಥ ರಕ್ಷಣಾತ್ಮಕ ತೆರಿಗೆನಿರ್ಧರಣೆಯನ್ನು ನೀಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ತಾನಾಗಿಯೇ ನೀಡಲಾದ ಯಾವುದೇ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯು ತಪ್ಪು ಎಂದು ಪರಿಗಣಿಸಿದರೆ, ಸಂಬಂಧಪಟ್ಟ ವ್ಯಾಪಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಪ್ರಕರಣದ ಸನ್ನಿವೇಶಕ್ಕೆ ನ್ಯಾಯೋಚಿತವಾದಂಥ ಆದೇಶವನ್ನು ಹೊರಡಿಸತಕ್ಕದ್ದು."

(2) (6)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(7) ಈ ಬಗ್ಗೆ ಆಯುಕ್ತರು ಪ್ರಾಧಿಕಾರ ನೀಡಿದ ಪ್ರಾಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಂದಾಯಿತನಾಗಲು ಬದ್ಧನಾಗಿದ್ದರೂ ಹಾಗೆ ಮಾಡಲು ತಪ್ಪಿದ ವ್ಯಾಪಾರಿಯ ತೆರಿಗೆ ನಿರ್ಧರಣೆಯನ್ನು, ಆ ವ್ಯಾಪಾರಿಯು ನೋಂದಾಯಿತನಾಗಿದ್ದರೆ ಯಾವ ತೆರಿಗೆ ಅವಧಿ ಅಥವಾ ಅವಧಿಗಳು ಅವನಿಗೆ ಅನ್ವಯಿಸುತ್ತವೆಯೋ ಅವುಗಳ ಬಗ್ಗೆ ತನ್ನ ಉತ್ತಮ ವಿವೇಚನೆಯ ಅನುಸಾರ ಮತ್ತು ಅಂಥ ತೆರಿಗೆ ನಿರ್ಧರಣೆಯ ವಿರುದ್ಧ ಕಾರಣಗಳನ್ನು ಬರಹದಲ್ಲಿ ತೋರಿಸಲು ಆ ವ್ಯಾಪಾರಿಗೆ ಅವಕಾಶವನ್ನು ಕೊಟ್ಟ ನಂತರ ಮಾಡತಕ್ಕದ್ದು. ಸದರಿ ತೆರಿಗೆ ನಿರ್ಧರಣೆಯನ್ನು ಆ ವ್ಯಾಪಾರಿಯ ಮೇಲೆ ಜಾರಿ ಮಾಡಿದ ದಿನಾಂಕದಿಂದ ಹತ್ತು ದಿನಗಳೊಳಗೆ ನಿರ್ಧರಿಸಿದ ತೆರಿಗೆ ಹಾಗೂ ಯಾವುದಾದರೂ ಬಡ್ಡಿ ಸಂದಾಯವಾಗಬೇಕಿದ್ದರೆ ಅದನ್ನು ವ್ಯಾಪಾರಿಯು ಸಂದಾಯ ಮಾಡತಕ್ಕದ್ದು."

**15. 39ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 39ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(1) "ತಪ್ಪಾಗಿದೆ ಅಥವಾ" ಎಂಬ ಪದಗಳಿಗೆ "ಅಥವಾ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(2) (ಎ) ಖಂಡದಲ್ಲಿ "ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರುನಿರ್ಧರಣೆ ಮಾಡಬಹುದು ಮತ್ತು ಯಾವುದೇ ದಂಡವನ್ನು ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕೆ ಒತ್ತಾಯಿಸಬಹುದು" ಎಂಬ ಪದಗಳಿಗೆ "ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರುನಿರ್ಧರಣೆ ಮಾಡಬಹುದು ಮತ್ತು 72ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಅಥವಾ (6)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ದಂಡವನ್ನು ಸಹ ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕಾಗಿ ಒತ್ತಾಯಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) (ಬಿ) ಖಂಡದಲ್ಲಿ "ನೋಂದಾಯಿತ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

**16. 40ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 40ನೇ ಪ್ರಕರಣದ (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆ ಸಂದಾಯಮಾಡಲು ತಪ್ಪಿದರೆ ಅಥವಾ 79ನೇ ಪ್ರಕರಣದ ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುವುದನ್ನು ಮೋಸದಿಂದ ತಪ್ಪಿಸಿಕೊಂಡರೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಐದು ವರ್ಷಗಳಿಗೆ ಎಂಬುದನ್ನು ಹತ್ತು ವರ್ಷಗಳಿಗೆ ಎಂದು ಉಲ್ಲೇಖಿಸಿದ್ದರೆ ಹೇಗೋ ಹಾಗೆ ತೆರಿಗೆ ನಿರ್ಧರಣೆಯನ್ನು ಮಾಡಬಹುದು ಅಥವಾ ಮರು ನಿರ್ಧರಣೆಯನ್ನು ಮಾಡಬಹುದು."

**17. 45ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 45ನೇ ಪ್ರಕರಣದಲ್ಲಿ (6)ನೇ ಉಪ ಪ್ರಕರಣದಲ್ಲಿ "ಭೂ ಕಂದಾಯದ ಬಾಕಿ" ಎಂಬ ಪದಗಳಿಗೆ "ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡಬೇಕಾದ ಬಾಕಿ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

**18. 52ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 52ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ,–

(1) (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎ–1) ಅಂಥ ವ್ಯಾಪಾರಿಯು ತೆರಿಗೆ ದರಪಟ್ಟಿಗಳು ಅಥವಾ ಮಾರಾಟದ ಬಿಲ್ಲುಗಳನ್ನು ನೀಡುವುದನ್ನು ಪರೀಕ್ಷಿಸುವುದಕ್ಕಾಗಿ ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಆವರಣದಿಂದ ತಾನು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು, ಯಾವುವೇ ಸರಕುಗಳ ಖರೀದಿ ಮಾಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಿಯು ಹಾಗೆ ಖರೀದಿಸಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ ವ್ಯಾಪಾರಿಯು ಅಥವಾ ವ್ಯವಹಾರದ ಆವರಣಗಳ ಪ್ರಭಾರದಲ್ಲಿರುವ ಯಾವೊಬ್ಬ ವ್ಯಕ್ತಿಯು ತಾನು ನೀಡಿದ್ದ ಯಾವುದೇ ತೆರಿಗೆ ದರಪಟ್ಟಿ ಅಥವಾ ಮಾರಾಟದ ಬಿಲ್ಲನ್ನು ರದ್ದುಪಡಿಸಿ ಸರಕುಗಳಿಗಾಗಿ ಸಂದಾಯಮಾಡಿದ್ದ ಮೊಬಲಗನ್ನು ಮರುಪಾವತಿ ಮಾಡತಕ್ಕದ್ದು."

(2) (ಐ) ಖಂಡದಲ್ಲಿ "ಆಯುಕ್ತನು" ಎಂಬ ಪದಕ್ಕೆ "ಅಂಥ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**19. 53ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 53ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ "ನಿಯಮಿಸಬಹುದಾದಂತೆ ತೆರಿಗೆ ಬೆಲೆಪಟ್ಟಿ, ಮಾರಾಟದ ಬಿಲ್ಲು ಅಥವಾ ರವಾನೆ ಚೀಟಿಯಂಥಹ ಇತರ ದಸ್ತಾವೇಜುಗಳನ್ನು": ಎಂಬ ಪದಗಳಿಗೆ "ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

**20. 58ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 58ನೇ ಪ್ರಕರಣದಲ್ಲಿ (2)ನೇ ಉಪ ಪ್ರಕರಣದಲ್ಲಿ "ಚಾರ್ಟರ್ಡ್ ಅಕೌಂಟೆಂಟ್" ಎಂಬ ಪದಗಳ ತರುವಾಯ "ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್" ಎಂಬ ಪದಗಳನ್ನು ಸೇರಿಸತಕ್ಕದ್ದು.

**21. 60ನೇ ಪ್ರಕರಣವನ್ನು ಬಿಟ್ಟುಬಿಡುವುದು.–** ಮೂಲ ಅಧಿನಿಯಮದ 60ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**22. 62ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 62ನೇ ಪ್ರಕರಣದಲ್ಲಿ,–

(1) (2)ನೇ ಉಪ ಪ್ರಕರಣದಲ್ಲಿ "ಯಾವುದೇ ಇತರ ಆದೇಶಕ್ಕೆ" ಎಂಬ ಪದಗಳಿಗೆ "ಯಾವುದೇ ಇತರ ಆದೇಶಕ್ಕೆ ಅಥವಾ ವ್ಯವಹರಣೆಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (4)ನೇ ಉಪ ಪ್ರಕರಣದಲ್ಲಿ (ಬಿ) ಖಂಡದಲ್ಲಿ "ಆದೇಶದ" ಮತ್ತು "ಆದೇಶಕ್ಕೆ" ಎಂಬ ಪದಗಳ ತರುವಾಯ ಅನುಕ್ರಮವಾಗಿ "ಅಥವಾ ವ್ಯವಹರಣೆಗಳ" ಮತ್ತು "ಅಥವಾ ವ್ಯವಹರಣೆಗಳಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) (6)ನೇ ಉಪ ಪ್ರಕರಣದಲ್ಲಿ (ಬಿ) ಖಂಡದಲ್ಲಿ "ಇತರ ಯಾವುದೇ ಆದೇಶದ" ಎಂಬ ಪದಗಳ ತರುವಾಯ "ಅಥವಾ ವ್ಯವಹರಣೆಗಳ" ಎಂಬ ಪದಗಳನ್ನು ಸೇರಿಸತಕ್ಕದ್ದು.

**23. 63ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 63ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಸರ್ಕಾರದಿಂದ ಈ ಸಂಬಂಧದಲ್ಲಿ ಪ್ರಾಧೀಕೃತನಾದ" ಎಂಬ ಪದಗಳಿಗೆ "ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ" ಎಂಬ ಪದಗಳನ್ನು ಹಾಗೂ (4)ನೇ ಉಪ ಪ್ರಕರಣದಲ್ಲಿ "ಸರ್ಕಾರದಿಂದ ಪ್ರಾಧಿಕೃತನಾದ" ಎಂಬ ಪದಗಳಿಗೆ "ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಪ್ರಾಧಿಕೃತನಾದ" ಎಂಬ ಪದಗಳನ್ನು 2006ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

**24. 72ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 72ನೇ ಪ್ರಕರಣದಲ್ಲಿ,–

(1) ಶೀರ್ಷಿಕೆಯಲ್ಲಿ "ವಿವರ ಪಟ್ಟಿಗಳಿಗೆ" ಎಂಬ ಪದಗಳ ತರುವಾಯ "ಮತ್ತು ತೆರಿಗೆ ನಿರ್ಧರಣಕ್ಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) (1)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1) ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಿದಂತೆ ಒಂದು ವಿವರಪಟ್ಟಿ ಸಲ್ಲಿಸಲು ತಪ್ಪಿದ ಅಥವಾ ಸಲ್ಲಿಸಿದ ಯಾವುದೇ ವಿವರ ಪಟ್ಟಿಯಂತೆ ಬಾಕಿ ಇರುವ ತೆರಿಗೆಯನ್ನು ಸಂದಾಯಮಾಡಲು ವಿಫಲನಾದ ಒಬ್ಬ ವ್ಯಾಪಾರಿಯು ಬಾಕಿ ಇರುವ ಯಾವುದೇ ತೆರಿಗೆ ಅಥವಾ ಬಡ್ಡಿಯ ಜೊತೆಗೆ,-

(ಎ) ತಪ್ಪಿದ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳಂತೆ ದಂಡವನ್ನು ಮತ್ತು ಹಾಗೆ ತಪ್ಪಿರುವುದು ಐದು ದಿನಕ್ಕಿಂತ ಹೆಚ್ಚಾಗಿದ್ದರೆ ಅಂಥ ದಂಡವು ಎರಡುನೂರಾ ಐವತ್ತು ರೂಪಾಯಿಗಳನ್ನು ಅಥವಾ ಬಾಕಿ ಇರುವ ತೆರಿಗೆಯ ಮೊಬಲಗು ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊಬಲಗನ್ನು ಮೀರತಕ್ಕದ್ದಲ್ಲದ ದಂಡವನ್ನು, ಮತ್ತು

(ಬಿ) ಬಾಕಿ ಇರುವ ತೆರಿಗೆಯ ಮೊಬಲಗಿನ ಶೇಕಡಾ ಹತ್ತರಷ್ಟು ಮೊಬಲಗಿಗೆ ಸಮನಾದ ಹೆಚ್ಚುವರಿ ದಂಡವನ್ನು,

- ಸಂದಾಯಮಾಡಲು ಹೊಣೆಗಾರನಾಗತಕ್ಕದ್ದು."

(3) (3)ನೇ ಉಪ ಪ್ರಕರಣಕ್ಕೆ "ಅಪೂರ್ಣವಾಗಿದ್ದ" ಎಂಬ ಪದಕ್ಕೆ ಮೊದಲು "ಆತನಿಗೆ ನೀಡಿದ ನೋಟೀಸಿನಲ್ಲಿ ತಿಳಿಸಲಾದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(4) (5)ನೇ ಉಪ ಪ್ರಕರಣಕ್ಕೆ (6)ನೇ ಉಪ ಪ್ರಕರಣವೆಂದು ಮರುಸಂಖ್ಯೆ ನೀಡತಕ್ಕದ್ದು.

(5) ಹಾಗೆ ಮರುಸಂಖ್ಯೆ ನೀಡಿದ (6)ನೇ ಉಪ ಪ್ರಕರಣಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ದಂಡನೆಯನ್ನು ಏಕೆ ವಿಧಿಸಬಾರದೆಂಬ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ತೋರಿಸುವ ಹೇಳಿಕೆಯನ್ನು ನೀಡಲು ಅವಕಾಶವನ್ನು ಕೊಟ್ಟ ತರುವಾಯ ಆತ ಸಂದಾಯಮಾಡಬೇಕಾದ 38ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದ ತೆರಿಗೆಯ ಅಥವಾ 39ನೇ ಪ್ರಕರಣದ ಅಡಿಯಲ್ಲಿ ಮರು ನಿರ್ಧರಿಸಿದ ತೆರಿಗೆ ಮೊಬಲಗಿನ ಶೇಕಡ ಮೂವತ್ತರ ದರದಲ್ಲಿ ದಂಡವನ್ನು ಸಂದಾಯಮಾಡಲು ಬದ್ಧನಾಗಿರತಕ್ಕದ್ದು."

**25. 73ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 73ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಮೀರದ" ಎಂಬ ಪದಕ್ಕೆ "ಸಮನಾದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**26. 74ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 74ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(1) "ಮತ್ತು ನಿರ್ವಹಿಸಲು" ಎಂಬ ಪದಗಳ ತರುವಾಯ "ಅಥವಾ ಸಿವಿಲ್ ಕಾಮಗಾರಿ ಕರಾರನ್ನು ಕೈಗೊಳ್ಳಲು ಮಾಡಿಕೊಂಡ ಒಪ್ಪಂದದ ಪ್ರತಿಯನ್ನು ಸಲ್ಲಿಸಲು" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) "ಐದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳಿಗೆ "ಯಾವುದೇ ಒಂದು ವರ್ಷದ ಅವಧಿಯಲ್ಲಿ ಹಾಗೆ ತಪ್ಪಿರುವುದು ಮೊದಲ ಬಾರಿಯಾಗಿದ್ದರೆ ಎರಡು ಸಾವಿರ ರೂಪಾಯಿಗಳಿಗೆ ಅಥವಾ ಆ ವರ್ಷದಲ್ಲಿ ಎರಡನೇ ಬಾರಿಗೆ ಅಥವಾ ಅದರ ನಂತರ ತಪ್ಪಿದ್ದರೆ ಐದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**27. ಒಂದನೇ ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ ಒಂದನೇ ಅನುಸೂಚಿಯಲ್ಲಿ,-

(1) 42ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(2) 50ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**28. ಮೂರನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ,–

(1) 34ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ "ಅಂಥವುಗಳು" ಎಂಬ ಪದಕ್ಕೆ ಮೊದಲು "ಯಾವುದೇ ಹೆಸರಿನಿಂದ ಕರೆಯಬಹುದಾದ ಸಾಫ್ಟ್‌ವೇರ್ ಲೈಸನ್ಸುಗಳನ್ನು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 52ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸಕತಕ್ಕದ್ದು, ಎಂದರೆ:–

"52. 1100 ವೋಲ್ಟ್‌ಗಳವರೆಗಿನ ಉಪಯೋಗಕ್ಕಾಗಿ ಆರು ಚದರ ಮಿಲಿ ಮೀಟರುಗಳ ವರೆಗಿನ ತಾಮ್ರ ಮತ್ತು ಅಲ್ಯೂಮಿನಿಯಂ ಸಿಂಗಲ್ ಕೋರ್ ಪಿವಿಸಿ ಕೇಬಲ್‌ಗಳನ್ನು ಹೊರತುಪಡಿಸಿ ಕೈಗಾರಿಕಾ ಕೇಬಲ್‌ಗಳು."

**29. ನಾಲ್ಕನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ನಾಲ್ಕನೇ ಅನುಸೂಚಿಯಲ್ಲಿ, 2ನೇ ಕ್ರಮ ಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:–

"3. ಡಿನೇಚರ್ಡ್ ಅನ್‌ಹೈಡ್ರಸ್ ಅಲ್ಕೋಹಾಲ್

4. ಡಿನೇಚರ್ಡ್ ಸ್ಪಿರಿಟ್

5. ಈಥೆಲ್ ಅಲ್ಕೋಹಾಲ್

6. ರೆಕ್ಟಿಫೈಡ್ ಸ್ಪಿರಿಟ್."

**30. ಅಧಿಸೂಚನೆಯನ್ನು ತಿದ್ದುಪಡಿಮಾಡಲು ಅಧಿಕಾರ.–** ಸರ್ಕಾರವು, ಅಧಿಸೂಚನೆಯ ಮೂಲಕ, 2007ರ ಏಪ್ರಿಲ್ ಐದನೇ ದಿನಾಂಕಕ್ಕೆ ಮೊದಲು ಮೂಲ ಅಧಿನಿಯಮದ 4ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ಪೂರ್ವಾನ್ವಯವಾಗಿ ತಿದ್ದುಪಡಿಮಾಡಬಹುದು ಅಥವಾ ಮಾರ್ಪಾಡುಮಾಡಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಜಿ. ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.